1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ,
ಕುಂದಾಪುರ

ಸಿ.ಸಿ. ನಂಬ್ರಃ1828/2015

ಚಾಸಾಃ6 ಪ್ರಾಸಾಃ6

ದಿನಾಂಕಃ 03.06.2026

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಯೋಗೀಶ್ |
| ತಂದೆಯ ಹೆಸರು | : | ಕೃಷ್ಣ ಪೂಜಾರಿ |
| ವಯಸ್ಸು | : | 42 ವರ್ಷ |
| ಉದ್ಯೋಗ | : | ಎಲೆಕ್ಟ್ರೀಷಿಯನ್ |
| ವಾಸ ಸ್ಥಳ | : | ಕೊಟೇಶ್ವರ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**<u>ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ.ರವರಿಂದಃ</u>**

ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ಸಹಿ ಮಾಡಲು ಹೇಳಿದ ಮೇರೆಗೆ ಸಹಿಯನ್ನು ದಿಃ 31-03-2015 ರಂದು ಕುಂದಾಪುರದ ಪೊಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ. ಸದ್ರಿ ಸಹಿಯನ್ನು ಮಾಡುವಾಗ ನನ್ನ ಸಮಕ್ಷಮ ಯಾರು ಇದ್ದರು ಎಂದು ಗೊತ್ತಿರುವುದಿಲ್ಲ. ಸಹಿಯನ್ನು 6 ಗಂಟೆಗೆ ಮಾಡಿರುತ್ತೇನೆ. ನನ್ನ ಸಮಕ್ಷಮ ಯಾವುದೇ ವಸ್ತುವನ್ನು ಜಪ್ತಿ ಪಡಿಸಿಕೊಂಡಿರುವುದಿಲ್ಲ. ಆರೋಪಿಗಳ ಪರಿಚಯವಿರುವುದಿಲ್ಲ.

ಈಗ ಸಾಕ್ಷಿಗೆ ನಿಪಿ-1ನ್ನು ತೋರಿಸಲಾಗಿ ಅದರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ-1(ಸಿ) ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಗೆ ವಿರುದ್ದವಾಗಿ ಸಾಕ್ಷಿ ನುಡಿದಿದ್ದರಿಂದ ಮಾನ್ಯ ಸ.ಸ.ಅ.ರವರು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ವಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)**

**<u>ವಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ</u>**

ದಿಃ 31-03-2015ರಂದು ಆನಂದ ಸಾರಂಗರವರ ಮನೆಯ ಹತ್ತಿರ ಪೊಲೀಸರು ಮಹಜರ್ ಗಾಗಿ ಬಂದಿದ್ದು ಆ ಸಮಯದಲ್ಲಿ ನೀವು, ಚಾಸಾ-2 ಮತ್ತು 5 ರವರು ಇದ್ದರು ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಕೃತ್ಯ ಸ್ಥಳವನ್ನು ಹಾಗೂ ಮುದ್ದೆ ಮಾಲುಗಳನ್ನು ಚಾಸಾ-2 ರವರು ತೋರಿಸಿರುತ್ತಾರೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಪಂಚನಾಮೆಯನ್ನು ನಿಮ್ಮೆಲ್ಲರ ಸಮಕ್ಷಮ 4ರಿಂದ 4-40ರವರೆಗೂ ಜರುಗಿಸಿರುತ್ತಾರೆ ಹಾಗೂ ಮುದ್ದೆ ಮಾಲುಗಳನ್ನು ನಿಮ್ಮ ಸಮಕ್ಷಮ ವಶಪಡಿಸಿಕೊಂಡಿರುತ್ತಾರೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಆರೋಪಿತರು ನಿಮಗೆ ಪರಿಚಯಸ್ಥರಾದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

**ವಾಟೀ ಸವಾಲುಃ ಆರೋಪಿತರ ಪರ ವಕೀಲರು ವಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.**

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**